



ಗಮನಿಸಬೇಕಾದ ಸಂಗತಿಗಳು. ಆದರೆ ಕೆಲವು ಮಂದಿ ಮಹಾರಾಜರ ತ್ಯಾಗವನ್ನು ಕೊಂಡಾಡಲು ಇನ್ನೊಂದು ವಿಚಾರವನ್ನು ಮುಂದುಮಾಡುವ ಪರಿಪಾಟ ಈಗಲೂ ನಡೆದಿದೆ. ಅಣೆಕಟ್ಟು ಕಟ್ಟಲು ಭಾರಿ ಮೊತ್ತ ಬೇಕಾದುದರಿಂದ ಮಹಾರಾಜರು ಮುಂಬೈನಲ್ಲಿ ಅರಮನೆಯ ಆಭರಣಗಳನ್ನು ಮಾರಿ ಹಣ ಒದಗಿಸಿದರು ಎಂಬುದು. ಬಹುಶಃ ನಾಲ್ವಡಿ ಅವರ ವಿಚಾರದಲ್ಲಿ ಕಥೆ ಎಂದರೆ ಇದೊಂದೇ. ಇವರ ತಾಯಿ ಕೆಂಪನಂಜಮ್ಮಣ್ಣಿಯವರು ಕೂಡ ಕರ್ನಾಟಕದ ಆರ್ಥಿಕ ಪರಿಸ್ಥಿತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಒಡವೆ ಮಾರಿ ಹಣ ಪಡೆಯಲು ಪ್ರೋತ್ಸಾಹಿಸಿದರು ಎಂಬ ಮಾತನ್ನು ಕೂಡ ಮುಂದುಮಾಡುತ್ತಿದ್ದಾರೆ. ಇಲ್ಲಿ ಪ್ರಶ್ನೆ ಏಳುವುದು ಮಾರಿದ್ದು ಯಾರು? ಮೌಲ್ಯ ಎಷ್ಟು? ಯಾವಾಗ? ಎಲ್ಲಿ ಈ ವಿಚಾರ ದಾಖಲಾಗಿದೆ ಎಂಬುದು. ಏಕೆಂದರೆ, ಹಿಂದೆಯೂ ಕೆಲವು ಬಾರಿ ಮೈಸೂರು ಸಂಸ್ಥಾನ ಸಾಲ ಮಾಡಿದ ಸಂದರ್ಭಗಳಿವೆ. ಆದರೆ ಆ ಎಲ್ಲ ಲೆಕ್ಕದ ವಿವರವೂ ಲಭ್ಯವಿದೆ. ಇದೊಂದರ ವಿವರ ಏಕಿಲ್ಲ? ಕನಿಷ್ಠ ಅರಮನೆಯ ಲೆಕ್ಕಪತ್ರ ವ್ಯವಹಾರದಲ್ಲಾದರೂ ಇಂಥ ಪತ್ರ ಇರಬೇಕಾಗಿತ್ತಲ್ಲ?

ಹಾಗಾದರೆ ಇಂಥ ಕಥೆಯ ಉದ್ದೇಶವಾದರೂ ಏನು? ಮಹಾರಾಜರ ತ್ಯಾಗವನ್ನು ಜನತೆಯ ಮುಂದಿಡುವುದೆ? ಅಥವಾ ಕನ್ನಂಬಾಡಿಯ ಪ್ರಶ್ನೆ ಬಂದಾಗಲೆಲ್ಲ ವಿಶ್ವೇಶ್ವರಯ್ಯನವರ ಪ್ರಭಾವಳಿಯೂ ದೊಡ್ಡದಾಗಿಯೇ ಇರುವುದರಿಂದ ಅದನ್ನು ಕೊಂಚ ಬದಿಗೆ ಸರಿಸುವುದೆ? ಈ ಕುರಿತು ಎಲ್ಲೂ ಗಂಭೀರ ಚರ್ಚೆಗಳಾದುದಿಲ್ಲ. ಕನ್ನಡ ಸಾಹಿತ್ಯ ಪರಿಷತ್ತು ಶ್ರವಣಬೆಳಗೊಳದಲ್ಲಿ

### ಅರಮನೆಯ ಸಾಲ

ಶ್ರೀಮನ್ ಮಹಾರಾಜ ಮುಮ್ಮಡಿಯವರ ಕಾಲದಲ್ಲಿ ವಾರ್ಷಿಕ ಆಯವ್ಯಯಗಳಿಗೆ ವ್ಯವಸ್ಥಿತ ಚೌಕಟ್ಟಿರದೆ, ಆದಾಯ ಮೀರಿದ ವೆಚ್ಚದಿಂದ ಪ್ರಭುತ್ವ ಆಗಾಗ ಸಾಲದ ಸುಳಿಗೆ ಸಿಕ್ಕಿಬೀಳುತ್ತಿತ್ತು. ಅಂತಹ ಸಂದರ್ಭದಲ್ಲಿ ಶ್ರೀರಂಗಪಟ್ಟಣದ ದಾಮೋದರ ದಾಸರಂತಹ ವಣಿಕರಿಂದ ಅರಮನೆಯ ಖರ್ಚುವೆಚ್ಚಕ್ಕೆ ನಗದನ್ನೂ, ಕೊಯಮತ್ತೂರಿನ ಲಕ್ಷ್ಮೀನರಸು ಚೆಟ್ಟಿಯವರಿಂದ ದಿನಸಿಗಳನ್ನು, ಪರ್ಷಿಯಾದಿಂದ ಬಂದು ಬೆಂಗಳೂರಲ್ಲಿ ನೆಲೆಸಿದ್ದ ಆಲಿ ಅಸ್ಕರ್ ಸಾಹೇಬರಿಂದ ಕುದುರೆಗಳನ್ನೂ ಉದ್ರಿ ಪಡೆಯಬೇಕಾಗಿತ್ತು. ಆ ಕಾಲದಲ್ಲಿ ಒಟ್ಟು 68 ವ್ಯಾಪಾರಿಗಳ ಬಳಿ ಅರಮನೆಯ ಸಾಲದ ಲೆಕ್ಕವಿದ್ದ ದಾಖಲೆಗಳಿವೆ.

(ರಾಜಮಾತೆ ಕೆಂಪನಂಜಮ್ಮಣ್ಣಿ,
ಡಾ. ಗಜಾನನ ಶರ್ಮ, 2024,
ಪು: 231)

2015ರಲ್ಲಿ ಏರ್ಪಡಿಸಿದ್ದ ಸಾಹಿತ್ಯ ಸಮ್ಮೇಳನದಲ್ಲಿ ಮುಖ್ಯಮಂತ್ರಿಗಳು ಮಾತನಾಡುತ್ತ ಮತ್ತೆ ಮಹಾರಾಜರು ಒಡವೆಗಳನ್ನು ಮಾರಿದ ಪ್ರಸಂಗವನ್ನು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದರು. ಇದರ ನಂತರ ಅನೇಕ ವೇದಿಕೆಗಳಲ್ಲಿ ಸಾಹಿತಿಗಳೂ ಈ ಕುರಿತು ಮಾತನಾಡಿದ್ದುಂಟು.

ಹಾಗೆ ನೋಡಿದರೆ ಮೈಸೂರು ಸಂಸ್ಥಾನ ತನ್ನ ರಾಜ್ಯದ ಅನೇಕ ಸಂಕಷ್ಟಗಳನ್ನು ಎದುರಿಸಲು ಸಾಲ ಮಾಡಬೇಕಾದ ಸಂದರ್ಭ ಎದುರಾದರೂ ಹಾಗೆ ಮಾಡದೆ ನಿಭಾಯಿಸಿದ್ದೂ ಉಂಟು. 1897ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸಹೋದರಿ ಜಯಲಕ್ಷ್ಮಮ್ಮಣ್ಣಿ ಅವರ ವಿವಾಹ ಅರಮನೆಯಲ್ಲಿ ನಡೆಯುತ್ತಿದ್ದಾಗ ಕಟ್ಟಿಗೆಯಲ್ಲಿ ನಿರ್ಮಿಸಿದ್ದ ಅರಮನೆಯ ವಿಸ್ತೀರ್ಣದ ಶೇ. 1/5 ಭಾಗ ಸುಟ್ಟು ಅನೇಕ ಕಲಾಕೃತಿಗಳು ಹಾಳಾದವು. ಅಂಬಾ ವಿಲಾಸಕ್ಕೂ ಧಕ್ಕೆಯಾಯಿತು. ಎಂಟು ಜನ ಸತ್ತರು. ಅವರಿಗೆ ನ್ಯಾಯೋಚಿತವಾಗಿ ಪರಿಹಾರವನ್ನು ಅರಮನೆ ಕೊಟ್ಟಿತು. ಆದರೂ ಕೆಂಪನಂಜಮ್ಮಣ್ಣಿ ಎದೆಗುಂದದೆ ಇದನ್ನು ನಿಭಾಯಿಸಿದರು. 1897ರಲ್ಲಿ ಮತ್ತೆ ಅರಮನೆಯ ನಿರ್ಮಾಣವನ್ನು ಪ್ರಾರಂಭಿಸಿ 1912ರಲ್ಲಿ ಮುಗಿಸಿದಾಗ, ಅದಕ್ಕೆ ತಗಲಿದ ವೆಚ್ಚ 25 ಲಕ್ಷ ರೂಪಾಯಿ. ಅದು ಆ ಕಾಲಕ್ಕೆ ದೊಡ್ಡ ಮೊತ್ತವೇ. ಆದರೆ ರಾಜ ಮನೆತನ ಆಗಲೂ ಸಾಲಕ್ಕೆ ಕೈಯೊಡ್ಡಲಿಲ್ಲ. ಅರಮನೆಗೆ ಬೆಂಕಿ ಬಿದ್ದ ವರ್ಷವೇ ರಾಜ್ಯದಲ್ಲಿ ಪ್ಲೇಗ್ ಹೆಮ್ಮಾರಿ ಕಾಣಿಸಿಕೊಂಡಿತು. ಒಂದು ಅಂದಾಜಿನಂತೆ 14,823 ಪ್ಲೇಗ್ ಪೀಡಿತರಲ್ಲಿ 12,273 ಮಂದಿ ಮೃತರಾದರು. ಈ ರೋಗದಿಂದ ಬೆಂಗಳೂರಿನ ಜನರನ್ನು ರಕ್ಷಿಸಲೆಂದೇ ಆಗ ಹೊಸ ಬಡಾವಣೆಗಳು ತಲೆ ಎತ್ತಿದವು. ಮಲ್ಲೇಶ್ವರ, ಬಸವನಗುಡಿ ಬಡಾವಣೆಗಳ ಹಿನ್ನೆಲೆ ಇದು. ಇದಕ್ಕಾಗಿ ಲಕ್ಷಾಂತರ ರೂಪಾಯಿ ವಿನಿಯೋಗಿಸಬೇಕಾಯಿತು. ಬೆಂಗಳೂರು ಮುನಿಸಿಪಾಲಿಟಿಯ ಆದಾಯವೇ ಶೇ. 40ರಷ್ಟು ಕಡಿಮೆಯಾಯಿತು. ಆದರೂ ಮೈಸೂರು ಸಂಸ್ಥಾನ ಇದನ್ನು ಯಶಸ್ವಿಯಾಗಿ ನಿರ್ವಹಿಸಿತು. ಆಗಲೂ ರಾಜ ಭಂಡಾರದಿಂದಲೇ ಇದಕ್ಕೆ ವ್ಯಯಿಸಲಾಯಿತು. ದೇಣಿಗೆ ಎತ್ತುವ ಅಥವಾ ಸಾಲ ಮಾಡುವ ಪ್ರಸಂಗ ಎದುರಾಗಲಿಲ್ಲ. ಬದಲು 37 ಲಕ್ಷ ರೂಪಾಯಿ ವೆಚ್ಚದಲ್ಲಿ ವಾಣಿವಿಲಾಸ ಆಸ್ಪತ್ರೆ ನಿರ್ಮಾಣವಾಯಿತು.

ಮೈಸೂರು ಸಂಸ್ಥಾನ ರಾಜ್ಯದ ಅಭಿವೃದ್ಧಿಗೆ ತನ್ನ ಅರಮನೆಯ ಭಂಡಾರದಿಂದಲೇ ಮಾಡಿದ ಖರ್ಚನ್ನು ಕುರಿತು ನೂರಾರು ಪುಟ ಬರೆಯಬಹುದು. ಕನ್ನಂಬಾಡಿ ಕಟ್ಟೆ ಕಟ್ಟಲು ಒಂದು ವೇಳೆ ಅರಮನೆಯ ಒಡವೆಗಳನ್ನು ಮಾರಿ ಹಣ ಹೊಂದಿಸಿದ್ದರೂ ಪ್ರಜೆಗಳೇನೂ ನಾಲ್ವಡಿ ಕೃಷ್ಣರಾಜರ ಬಗ್ಗೆ ತಪ್ಪು ತಿಳಿಯುತ್ತಿರಲಿಲ್ಲ. ಸಂಸ್ಥಾನಕ್ಕಾದ ಅವಮಾನ ಎಂದೂ ಭಾವಿಸುತ್ತಿರಲಿಲ್ಲ. ಏಕೆಂದರೆ ಮೂಲ ಉದ್ದೇಶ ಸಂಸ್ಥಾನದ ಪುರೋಭಿವೃದ್ಧಿ. ಆದರೆ ಇದಕ್ಕೂ ಅರಮನೆಯಲ್ಲಿ ದಾಖಲೆ ಇದ್ದೇ ಇರುತ್ತಿತ್ತು. ಇಷ್ಟು ದೊಡ್ಡ ವ್ಯವಹಾರ ಕಣ್ಣು ತಪ್ಪಿಸುವುದು ಹೇಗೆ?

ಈವರೆಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕುರಿತು ಬಂದಿರುವ ಅಧಿಕೃತ ಪುಸ್ತಕಗಳಲ್ಲಾಗಲಿ ಅಥವಾ ವಿಶ್ವೇಶ್ವರಯ್ಯನವರ ನನ್ನ ವೃತ್ತಿ ಜೀವನದ ನೆನಪುಗಳು ಕೃತಿಯಲ್ಲಾಗಲಿ, ಒಡವೆ ಮಾರಿ ಕನ್ನಂಬಾಡಿ ಖರ್ಚು ನಿಭಾಯಿಸಿದ್ದನ್ನು ಕುರಿತು ಪ್ರಸ್ತಾಪವಿಲ್ಲ. ಸಾಕ್ಷಿಯನ್ನು ಒದಗಿಸುವವರೆಗೆ ಈ ಪ್ರಸಂಗ ಕಥೆ ಎನಿಸಿಕೊಳ್ಳುತ್ತದೆ ಅಷ್ಟೇ.

ಪ್ರತಿಕ್ರಿಯಿಸಿ: feedback@sudha.co.in